# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

ಸಿ.ಸಿ. ನಂಃ **656/2016**

**ಸಿ.ಡಬ್ಲ್ಯೂಃ 06 ಪಿಡಬ್ಲ್ಯೂಃ11**

ಸಾಕ್ಷಿದಾರರ ಹೆಸರುಃ ಹಣ್ಣಿ ಪ್ರಕಾಶ ತಂದೆಃವೀರಭದ್ರ್ರಪ್ಪ
ವಯಸ್ಸುಃ 53 ವರ್ಷ
ಉದ್ಯೋಗಃ ವ್ಯವಸಾಯ
ಸಾಕೀನಃ ಹಡಗಲಿ.

ದಿಃ 30-05-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸ.ಸ.ಅ ರವರಿಂದಃ

**ಆರೋಪಿತನ ಪರಿಚಯ ಇರುವುದಿಲ್ಲ. ನನಗೆ ಚಾ.ಸಾ.01 ರಿಂದ 05 ಮತ್ತು 07 ರಿಂದ 09 ರವರ ಪರಿಚಯ ಇರುವುದಿಲ್ಲ.**

**02. ನಾನು ಯಾವುದೇ ಘಟನೆ ನೋಡಿಲ್ಲ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರೂಗಿಸಿಲ್ಲ, ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ, ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಯಾವುದೇ ಮುದ್ದೆಮಾಲುಗಳನ್ನು ಗುರುತಿಸಲಾಗುವುದಿಲ್ಲ. ಸಾಕ್ಷಿಗೆ ನಿ.ಪಿ.02 ರ ಸ್ಥಳ ಪಂಚನಾಮೆ ಮತ್ತು ನಿ.ಪಿ.08 ರ ಕಚ್ಚಾ ನಕಾಶೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ಎರಡು ಸಹಿಗಳನ್ನು ನೋಡಿ ಗುರುತಿಸಿ ಅವುಗಳು ನಮ್ಮ ಅಣ್ಣನಾದ ಹಣ್ಣಿ ಸುರೇಶನ ಸಹಿ ಆಗಿರುತ್ತವೆ ಎಂದು ಗುರುತಿಸಿರುತ್ತಾರೆ. ಸಾಕ್ಷಿಯು ಅವರ ಅಣ್ಣನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ.ಪಿ.02 ಸಿ. ಮತ್ತು ನಿ.ಪಿ.03 ಸಿ. ಎಂದು ಗುರುತಿಸಲಾಯಿತು. ಇದಲ್ಲದೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ದಾಖಲೆಗೆ ಸಹಿ ಮಾಡಿರುವುದಿಲ್ಲ.**

***(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)***

ಪಾಟೀ ಸವಾಲುಃ ಸ.ಸ.ಅ ರವರಿಂದ ;

**03. ದಿನಾಂಕ : 08-01-2016 ರಂದು ಹಡಗಲಿ ಹೊಳಗುಂದಿ ರಸ್ತೇಯ ಬಳಿ ಇರುವ ಬಸವಪ್ರಭಾ ನಗರದಲ್ಲಿನ ವಾರ್ಡ್ ನಂಬರ 08 ರಲ್ಲಿನ ಮನೆ ನಂಬರ 198/ಎ ನೇದ್ದರಲ್ಲಿ ನನ್ನ ಮತ್ತು ಚಾ.ಸಾ.07 ರವರ ಸಮಕ್ಷಮದಲ್ಲಿ ಚಾ.ಸಾ.16**

ರವರು ಬೆ.**09.00** ರಿಂದ **10.00** ಗಂಟೆಯವರೆಗೆ ಚಾ.ಸಾ.**1** ರವರು ತೋರಿಸಿದ ಸ್ಥಳದಲ್ಲಿ ನಿ.ಪಿ.**02** ಮತ್ತು **3** ರಂತೆ ಕೃತ್ಯ ಸ್ಥಳದ ಪಂಚನಾಮೆ ಮತ್ತು ಕಚ್ಛಾ ನಕಾಶೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಇರುವಂತಹ **04** ಫೋಟೋಗಳನ್ನು ಚಾ.ಸಾ.**16** ರವರು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.**02** ಮತ್ತು **03** ರಲ್ಲಿ ಬರೆದಿರುವ ಸಂಗತಿಗಳೆಲ್ಲವೂ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಆಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃಆರೋಪಿ ಪರ ವಕೀಲರವರಿಂದ ಪಾಟೀ ಸವಾಲು ಇರುವುದಿಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

" ನನ್ನ ಸಮಕ್ಷಮ "

**Sd/-**

(ಶ್ರೀಮತಿ ಅಕ್ಷತಾ ಟಿ.)

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು., ಹಡಗಲಿ.